Survey No. 61 of Chickmallur (Acquisition for Adikarnatakas of Mangalavarpet).

Q.—7. Sri V. VENKATAPPA (Channapatna Constituency).—

Will the Government be pleased ro state:—

(*a*) when the Government Order was passed sanctioning the acquisition of Survey No. 61 of Chickmallur village in Channapatna Taluk for laying out an extension of the Adikarnatakas of Mangalavarpet;

(*b*) whether it is not a fact that the Government Order directed the Sub-Division Officer of Ramanagaram to take possession of the land immediately under Section 17(1) of Land Acquisition Act and distribute the same after dividing it into sites among Adikarnatakas of Mangalavarpet, Channapatna;

(*c*) if so, has the order been carried out in its entirety; if not, why?

A.—Sri T. CHANNIAH (Minister for Public Health and Local Self-Government).—

(*a*) On the 14th November 1952.

(*b*) Yes.

(*c*) The Order could not be given effect to immediately as an appeal presented to Government on the 3rd March 1953 for cancellation of the acquisition was under consideration and the owners of the land who had purchased it prior to the acquisition had also to be provided with sites elsewhere. Orders are issued on the 5th March 1955 to give effect to the acquisition.

ಶ್ರೀ ವಿ. ವೆಂಕಟಪ್ಪ.—ಹೋದವರ್ಷ ಜೂಲೈ ತಿಂಗಳಲ್ಲಿ ಈ ಜಮೀನನ್ನು ಕೂಡಲೇ ಸ್ವಾಧೀನಕ್ಕೆ ತೆಗೆದುಕೊಂಡು ಹಂಚಿಕೊಡಬೇಕು ಎಂದು ಇದೇರೀತಿ ಅಪ್ಪಣೆ ಮಾಡಿದ್ದಿರಲ್ಲವೆ?

ಶ್ರೀ ಟಿ. ಚನ್ನಯ್ಯ.—ಮಾಡಿದ್ದೆವು.

ಶ್ರೀ ವಿ. ವೆಂಕಟಪ್ಪ.—ಅದನ್ನು ಒಂದು ವರ್ಷವಾದರೂ ಕೂಡ ಯಾಕೆ ಜಾರಿಗೆ ಕೊಡಲಿಲ್ಲ?

ಶ್ರೀ ಟಿ. ಚನ್ನಯ್ಯ.—61ನೆ ಸರ್ವೆ ನಂಬರಿನಲ್ಲಿ 15 ಸೈಟುಗಳನ್ನು ತೆಗೆದುಕೊಂಡಿದ್ದವರಿಗೆ ಸೈಟುಗಳನ್ನು exchange ಕೊಡಿಸಬೇಕಾಗಿತ್ತು. Spun Silk Millsಗೆ ಸೇರಿದ ಜಾಗವನ್ನು ಅವರಿಗೆ ಅಕ್ವೈರ್ ಮಾಡಿ ಕೊಡಬೇಕಾಗಿತ್ತು. ಆದ್ದರಿಂದ ಜಾಗ್ರತೆಯಾಗಿ ಕೊಡುವುದಕ್ಕಾಗಲಿಲ್ಲ.

ಶ್ರೀ ವಿ. ವೆಂಕಟಪ್ಪ.—ಅಕ್ವೈರ್ ಮಾಡಿಕೊಂಡ ಕಡೆಯಲ್ಲೆಲ್ಲಾ ಬೇರೆ ಕಡೆ ಸೈಟ್ ಕೊಟ್ಟಮೇಲೆ ಅಕ್ವೈರ್ ಮಾಡಿಕೊಳ್ಳುತ್ತೀರಾ?

ಶ್ರೀ ಟಿ. ಚನ್ನಯ್ಯ.—ಅವರು ಮನೆಗಳನ್ನು ಕಟ್ಟುವುದಕ್ಕೆ ಸೈಟುಗಳನ್ನು ತೆಗೆದುಕೊಂಡಿದ್ದು. ಅವರಿಗೆ ಬೇರೆಕಡೆ ಸೈಟ್ ಕೊಟ್ಟಹೊರತು ನಾವು ಸೈಟುಗಳನ್ನು ಬಿಟ್ಟುಕೊಡುವುದಕ್ಕೆ ಸಾಧ್ಯವಿಲ್ಲವೆಂದು ವಿರೋಧಮಾಡಿದ ಕಾರಣ ಸ್ವಲ್ಪ ನಿಧಾನವಾಯಿತು.

ಶ್ರೀ ವಿ. ವೆಂಕಟಪ್ಪ.—ಈಗ 5ನೇ ತಾರೀಖಿನ ದಿವಸ ನೀವು order ಮಾಡಿದ್ದೇವೆಂದು ಹೇಳುತ್ತೀರಲ್ಲ ಅದನ್ನು ಕೂಡಲೇ ಜಾರಿಗೆ ತರುತ್ತೀರಾ?

ಶ್ರೀ ಟಿ. ಚನ್ನಯ್ಯ.—ಕೂಡಲೇ ಜಾರಿಗೆ ಕೊಡಬೇಕೆಂದು ಡೆಪ್ಯುಟಿ ಕಮೀಷನರಿಗೆ ತಿಳಿಸಲಾಗಿದೆ.

ಶ್ರೀ ವಿ. ವೆಂಕಟಪ್ಪ.—ಇದುವರೆಗೂ ಏನಾದರೂ ಕೆಲಸ ತೆಗೆದುಕೊಂಡಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಈ ತಿಂಗಳು 5ನೆ ತಾರೀಖು ಆರ್ಡರ್ ಕಳುಹಿಸಿದ್ದೇವೆ. ಜಾಗ್ರತೆ ಮಾಡಬೇಕೆಂಬುದಾಗಿ ಸೂಚನೆ ಕೊಟ್ಟಿದ್ದೇವೆ.

ಶ್ರೀ ವಿ. ವೆಂಕಟಪ್ಪ.—ಹೋದ ಸಲ ಸೂಚನೆ ಕೊಟ್ಟಾಗಲೂ ಕೂಡ ಒಂದು ವಾರದೊಳಗೆ ಅವರಿಗೆ ಕೊಡಿಸಬೇಕೆಂದು ಹೇಳಿದ್ದಿರಲ್ಲವೆ?

ಶ್ರೀ ಟಿ. ಚನ್ನಯ್ಯ.—ಹೋದಸಾರಿ ಆ ಸೂಚನೆ ಕೊಟ್ಟಾಗ ಆ ಜಮೀನು ಬಿಟ್ಟುಕೊಡುವುದಕ್ಕೆ ಸಾಧ್ಯವಿಲ್ಲವೆಂದು ವಿರೋಧ ಮಾಡಿದ್ದರಿಂದ ನಿಧಾನವಾಯಿತು. ಈಗ ಆ ತರಹ ತೊಂದರೆಯೇನೂ ಇಲ್ಲ. ಬೇರೆ ಸೈಟುಗಳು ಕೊಡುತ್ತೇವೆಂದು ಹೇಳಿರುವುದರಿಂದ ಅವರು ಒಪ್ಪಿಕೊಂಡಿದ್ದಾರೆ. ಈಗ ಬಿಟ್ಟು ಕೊಡುವುದಕ್ಕೆ ಸಿದ್ಧವಾಗಿದ್ದಾರೆ.

Sri Mulka GOVINDA REDDY.—Why did you accept the appeal by the owners of the land on 3rd March 1953 when the Government Order was passed on 14th November 1952?

Sri T. CHANNIAH.—Because the owners of the sites who had purchased 15 sites in Survey No. 61 did not willingly give away the land acquired Therefore, there was delay and the appeal petition had to be considered by the Government.

Sri Mulka GOVINDA REDDY.—Before the Government passed orders on 14th November 1952, did they not receive reports from their subordinate officers that this acquisition was absolutely necessary?

Sri T. CHANNIAH.—Acquisition proceedings were instituted in the beginning of 1951 and as there was opposition from these 15 persons who had purchased plots there, the acquisition was dropped. Subsequently, acquisition proceedings were revived and the acquisition was sanctioned in the year 1952.

Sri Mulka GOVINDA REDDY.—The other day you were telling us that you

require not more than 8 days to pass an order on any petition that comes up before the Government regarding your Departments. Why did you take two years and two days for this purpose ?

Sri T. CHANNIAH.—What I said was that there would be no delay in the disposal of papers in my office. Generally no file will be with me for more than a week. There has been some delay in this particular case, as the owners objected to the acquisition of the lands and as the matter was in correspondence with the Local Self-Government Commissioner. The plots proposed to be given to the displaced owners were in the possession of the Spun Silk Mills.

ಶ್ರೀ ಬಿ. ಹುಚ್ಚೇಗೌಡ.—ಅರವತ್ತೊಂದನೇ ಸರ್ವೇ ನಂಬರ್‌ನಲ್ಲಿ ಎಷ್ಟು ಜನ ವಾಸ ಮಾಡುತ್ತಾ ಇದ್ದರು, ಸ್ವಾಮಿ ?

ಶ್ರೀ ಟಿ. ಚನ್ನಯ್ಯ.—ವಾಸ ಮಾಡುತ್ತಾ ಇರಲಿಲ್ಲ. 15 ಜನಕ್ಕೆ ಸೇರಿತ್ತು.

ಶ್ರೀ ಬಿ. ಹುಚ್ಚೇಗೌಡ.—ಅವರು ಮನೆ ಇಲ್ಲದವರು, ಬಡವರು ಅಲ್ಲವೇ, ಸ್ವಾಮಿ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಬಿ. ಹುಚ್ಚೇಗೌಡ.—ಅವರಿಗೆ ತಾವು ಮನೆ ಕಟ್ಟಿಕೊಳ್ಳುವುದಕ್ಕೆ ಪ್ರತಿಯೊಂದು ಸೈಟಿಗೂ ಎಷ್ಟಾಗುತ್ತದೆಯೋ ಅಷ್ಟು ಮಾತ್ರ ತಾನೆ ಕೊಟ್ಟುಕೊಂಡು ಕೊಂಡಿದ್ದೀರಿ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಬಿ. ಹುಚ್ಚೇಗೌಡ.—ಅವರನ್ನು ಅಲ್ಲಿಂದ ಬಿಡಿಸ ಬೇಕಾದ ಅವಶ್ಯಕತೆ ಏನಿತ್ತು ?

ಶ್ರೀ ಟಿ. ಚನ್ನಯ್ಯ.—ಮಂಗಳವಾರ ಹೇಚೆ ಎಕ್ಸ್‌ಟೆನ್ಷನ್‌ಗೆ ಪಕ್ಕದಲ್ಲೇ ಆ ಸೈಟು ಇರುವುದರಿಂದ ಅವರಿಗೆ ಅನುಕೂಲವಾಗಿದೆ, ಆ ಜಾಗವನ್ನು ಅಕ್ವೈರ್ ಮಾಡಿದರೆ ಎಕ್ಸ್‌ಟೆನ್ಷನ್ ಕಟ್ಟುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿ ಅಕ್ವಿಸಿಷನ್ ಕ್ರಮ ಕೈಗೊಂಡಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಆದಿಕರ್ನಾಟಕರೆಲ್ಲಾ ಒಟ್ಟಿಗೆ ಒಂದೇ ಹಟ್ಟಿಯಲ್ಲಿ ಇರಬೇಕು, ಬೇರೆಯವರೆಲ್ಲಾ ಇನ್ನೊಂದು ಕಡೆ ಇರಬೇಕು ಎಂಬುದು ಸರ್ಕಾರದವರ ಸಿದ್ಧಾಂತವೇ ?

ಶ್ರೀ ಟಿ. ಚನ್ನಯ್ಯ.—ಆದಿಕರ್ನಾಟಕರು ಇರತಕ್ಕ ಪ್ರದೇಶದಲ್ಲಿ ಅವರಿಗೆ ಅನುಕೂಲವಾಗುವ ಹಾಗಿದ್ದರೆ ಅಂಥ ಜಮೀನನ್ನು ಅಕ್ವೈರ್ ಮಾಡಿಕೊಡಬೇಕೆಂದು ಇದೆಯೇ ಹೊರತು ಬೇರೆ ಯಾವ ಉದ್ದೇಶವೂ ಇಲ್ಲ. ಬೇರೆ ಸ್ಥಳದಲ್ಲಿ ಅಕ್ವೈರ್ ಮಾಡಿದರೆ ಎರಡು ಭಾಗ ಆಗುತ್ತದೆ, ಅವರು ಅಲ್ಲಿಗೆ ಹೋಗುವುದಕ್ಕೆ ಇಷ್ಟ ಪಡುವುದಿಲ್ಲ; ಆದ್ದರಿಂದ ಪಕ್ಕದಲ್ಲೇ ಇರತಕ್ಕ ಜಮೀನನ್ನು ಸಾಧ್ಯವಾದ ಮಟ್ಟಿಗೂ ಅಕ್ವೈರ್ ಮಾಡಬೇಕೆಂದು ಪ್ರಯತ್ನ ಮಾಡುತ್ತಾರೆ.

ಶ್ರೀ ಬಿ. ಹುಚ್ಚೇಗೌಡ.—ಆದಿಕರ್ನಾಟಕರಲ್ಲಿ ಎರಡು ಭಾಗ ಆಗುತ್ತದೆ ಎಂದು ಹೇಳಿದಿರಿ. ಆ ರೀತಿ ಸರ್ಕಾರದ ನೀತಿಯಿಂದ ಆದಿಕರ್ನಾಟಕರ ಪಕ್ಕದಲ್ಲಿ ಆದಿಕರ್ನಾಟಕರೇ ಇರಬೇಕು, ಬೇರೆಯವರು ಇರ ಕೂಡದು ಎಂದು ಆಗುವುದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಅದು ಸರ್ಕಾರದ ನೀತಿ ಅಲ್ಲ. ದೂರವಾಗಿರುವ ಸ್ಥಳಕ್ಕೆ ಅವರು ಹೋಗುವುದಕ್ಕೆ ಒಪ್ಪುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಅಕ್ವೈರ್ ಮಾಡಿಕೊಂಡ ಮೇಲೆ ಆ ಜಮೀನಿನವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಬೇರೆ ಸ್ಥಳ ಎಲ್ಲಿ ಕೊಟ್ಟಿದ್ದೀರಿ ?

ಶ್ರೀ ಟಿ. ಚನ್ನಯ್ಯ.—ಸ್ಪಿನ್ನಿಂಗ್ ಫ್ಯಾಕ್ಟರಿ ಹತ್ತಿರ ಅಕ್ವೈರ್‌ಮಾಡಿ 16 ಸೈಟುಗಳನ್ನು ಕೊಡಲಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಉದ್ದೇಶಪಟ್ಟು ಅವರನ್ನು ತೆಗೆದು ಹಾಕಬೇಕೆಂದುತಾನೆ ಮಾಡಿದ್ದು ?

ಶ್ರೀ ಟಿ. ಚನ್ನಯ್ಯ.—ಉದ್ದೇಶಪಟ್ಟು ಮಾಡಿದ್ದಲ್ಲ, ಅನುಕೂಲ ಮಾಡಿಕೊಡಬೇಕೆಂಬುದಾಗಿ ಮಾಡಿದೆ.

Local Cess and Special Cess.

Q.—459. **Sri B. HUTCHE GOWDA** (Turuvekere).—

Will the Government be pleased to state :—

(*a*) whether the answer furnished to question No. 605 (*b*) during the last October Session of 1954 stating that the local cess and special cess have been collected at the rate of two annas and six pies respectively per rupee, is not in contravention of the rules ;

(*b*) whether they had not ordered the cancellation of the special cess on 6th December 1954 at the time when the local cess levied at one anna was enhanced to two annas ;

(*c*) whether the excess amount collected would be refunded to the raiyats ; if so, when ?

A.—**Sri T. CHANNIAH** (Minister for Public Health and Local Self-Government).—

(*a*) The answer did not say that both local cess and special cess were collected. It stated that special cess was merged in the consolidated cess at two annas in the rupee.

(*b*) Yes.

(*c*) Yes, if any excess has been collected.

ಶ್ರೀ ಬಿ. ಹುಚ್ಚೇಗೌಡ.—ಎಷ್ಟು ವಸೂಲು ಮಾಡಿದ್ದೀರಿ ; ದುಬಾರಿಯಾಗಿ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಎಷ್ಟು ಮೊಬಲಗು ವಸೂಲು ಮಾಡಿದೆ ಎಂಬ ಅಂಕಿ ಅಂಶ ಇಲ್ಲ. ಈಗ ಸ್ವಲ್ಪ ಭಾಗ ಮಾಡಿದ್ದಾರೆ ಎಂದು ಗೊತ್ತಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಕೆಲವುಕಡೆ ಎರಡಾಣೆ ಯಂತೆ ವಸೂಲು ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.